1994-95ರಲ್ಲಿ ನಿರೀಕ್ಷಿಸಿದ ಅಬಕಾರಿ ಸಂಪನ್ಮೂಲ

207 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬಳ್ಳಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994-95ನೇ ಸಾಲಿನ ಅಬಕಾರಿ ಇಲಾಖೆಯಿಂದ ಸರ್ಕಾರ ನಿಗಧಿ ಪಡಿಸಿರುವ ಸಂಪನ್ಮೂಲ ಎಷ್ಟು ಮತ್ತು ಇದುವರೆವಿಗೂ ಸಂಗ್ರಹಿಸಿರುವ ಹಣವೆಷ್ಟು?*

ಆ) *ಸರ್ಕಾರಕ್ಕೆ ಬಾಕಿ ಬರಬೇಕಾಗಿರುವ ಗುತ್ತಿಗೆದಾರರ ಹೆಸರು, ಬಾಕಿ ಮೊತ್ತ ಎಷ್ಟು (ಸಂಪೂರ್ಣ ವಿವರ ನೀಡುವರೆ)?*

ಇ) *ಬಾಕಿ ವಸೂಲಿ ಮಾಡಲು ಇಲಾಖೆಯ ಅಧಿಕಾರಿಗಳು ಗುತ್ತಿಗೆದಾರರ ಜೊತೆ ಶಾಮೀಲಾಗಿ ವಸೂಲಾತಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ ವಸೂಲಾತಿಗಾಗಿ ಕೈಗೊಂಡ ಕ್ರಮಗಳೇನು?*

ಶ್ರೀ ತಿಪ್ಪೇಸ್ವಾಮಿ (ಅಬಕಾರಿ ಸಚಿವರು) :

ಅ) 1994-95ನೇ ಸಾಲಿನಲ್ಲಿ ಇಲಾಖೆಗೆ ನಿಗಧಿ ಪಡಿಸಿರುವ ಸಂಪನ್ಮೂಲವು ರೂ. 740 ಕೋಟಿ, ದಿನಾಂಕ 22-3-95 ರ ವರೆಗೆ ರೂ. 635 ಕೋಟಿ ವಸೂಲಾಗಿರುತ್ತದೆ.

ಆ) 1945-46 ರಿಂದ 1993-94ರವರೆಗೆ 212.13 ಕೋಟಿ ರೂ.ಗಳು ಬಾಕಿ ಇರುತ್ತದೆ. (ಬಾಕಿದಾರರ ವಿವರಗಳನ್ನು ಒದಗಿಸಿರುವ ಪಟ್ಟಿಯನ್ನು ಇದೇ ದಿನ ಸದನದಲ್ಲಿ ಉತ್ತರಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 23ಕ್ಕೆ ಲಗತ್ತಿಸಿದ್ದು, ಅದೇ ಪಟ್ಟಿಯು ಈ ಪ್ರಶ್ನೆಗೂ ಅನ್ವಯವಾಗುತ್ತದೆ).

ಇ) ಇಲ್ಲ.

ಈ) ಮೇಲಿನ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಕಳ್ಳಂಬೆಳ್ಳ ಕ್ಷೇತ್ರದಲ್ಲಿನ ಸಣ್ಣ ನೀರಾವರಿ ಯೋಜನೆಗಳು

208 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಳ್ಳಂಬೆಳ್ಳ ವಿಧಾನ ಸಭಾ ಕ್ಷೇತ್ರದಲ್ಲಿ 94-95ನೇ ಸಾಲಿನಲ್ಲಿ ಕೈಗೊಂಡಿರುವ ಸಣ್ಣ ನೀರಾವರಿಗಳಾವುವು;*

ಆ) *ಈ ಯೋಜನೆಗಳಿಗೆ ಎಷ್ಟು ಹಣ ಒದಗಿಸಲಾಗಿದೆ ಹಾಗೂ ಖರ್ಚಾಗಿರುವ ಹಣವೆಷ್ಟು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು)

ಅ) ಮಾಹಿತಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

ಅನುಬಂಧ

ಕಳ್ಳಂಬೆಳ್ಳ ವಿಧಾನ ಸಭಾ ಕ್ಷೇತ್ರದಲ್ಲಿ 94-95ನೇ ಸಾಲಿನಲ್ಲಿ ಕೈಗೊಂಡಿರುವ ಸಣ್ಣ ನೀರಾವರಿ ಕಾಮಗಾರಿಗಳು ನಿ ಒದಗಿಸಿರುವ ಹಾಗೂ ಖರ್ಚಾಗಿರುವ ಹಣದ ವಿವರಣಾ ಪಟ್ಟಿ.

ಕ್ರ. ಸಂ.	ಕಾಮಗಾರಿಯ ಹೆಸರು	ತಾಲ್ಲೂಕು	ಒದಗಿಸಿದ ಅನುದಾನ	ಖರ್ಚಾಗಿರುವ ಹಣ
1)	ಮಾರಗೊಂಡನಹಳ್ಳಿ ಬಳಿ ಹೊಸ ಕೆರೆ	ಶಿರಾ	1.00	2.38
2)	ಗಂಡಿಕೆರೆ ಬಳಿ ಹೊಸ ಕೆರೆ		1.00	1.86
3)	ಬುಕ್ಕಾಪಟ್ಟಣ ನಂದಿಹಳ್ಳಿ ಹೊಸ ಕೆರೆ	ಶಿರಾ	0.25	1.52
4)	ಮುಡಿಯಡು ತಿಮ್ಮಯ್ಯನ ಕಟ್ಟಿ ಹೊಸ ಕೆರೆ	ಶಿರಾ	0.25	-
5)	ನವಣೆ ಬೋರಿನಹಳ್ಳಿ ಬಳಿ ಒಡ್ಡು	ಶಿರಾ	0.05	1.12
6)	ಕಾರಿಲಿಂಗನಹಳ್ಳಿ ಬಳಿ ಪಿಕಪ	ಶಿರಾ	0.05	0.53
7)	ಭೂಪಸಂದ್ರ ಬಳಿ ಗಂಗಾ ಕಲ್ಯಾಣ ಯೋಜನೆ	ಶಿರಾ	0.10	0.31
8)	ಜೋಡಿತಿಮ್ಮನಹಳ್ಳಿ ಹೊಸ ಕೆರೆ		0.05	-
9)	ಯರಬಳ್ಳಿ ಹೊಸ ಕೆರೆ		0.70	-

1994-95ರಲ್ಲಿ ಮರುಪರವಾನಿಗೆ ನೀಡಿದ ವೈನ್‌ಸ್ಟೋರ್ ಮತ್ತು ಬಾರ್‌ಗಳು.

209 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1994-95ನೇ ಸಾಲಿನಲ್ಲಿ ಹೊಸದಾಗಿ ಹಾಗೂ ಮರುಪರವಾನಿಗೆ ನೀಡಿದ ವೈನ್ ಸ್ಟೋರ್ಸ್ ಹಾಗೂ ಬಾರ್‌ಮತ್ತು ರೆಸ್ಟೋರೆಂಟ್‌ಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ರಾಜ್ಯದಲ್ಲಿ ಬಹಳಷ್ಟು ಕಡೆಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಬೆಂಗಳೂರು ನಗರದ ಪ್ರದೇಶದಲ್ಲಿ ಆಕ್ಷೇಪಾರ್ಹ ಸ್ಥಳಗಳಿಂದ 50 ಮೀಟರ್ ಒಳಗೆ ಇರತಕ್ಕಂತಹ ಎಷ್ಟು ವೈನ್ ಶಾಪ್ ಹಾಗೂ ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಮರು ಪರವಾನಿಗೆ ನೀಡಲಾಗಿದೆ?

ಇ) ಹೀಗೆ ಮರು ಪರವಾನಿಗೆ ನೀಡಲು ಕಾರಣಗಳೇನು? ಇದು ಸರ್ಕಾರದ ನೀತಿಗೆ ವಿರುದ್ಧವಾಗಿಲ್ಲವೇ?

ಈ) ಹೀಗೆ ಆಕ್ಷೇಪಣಾರ್ಹ ಸ್ಥಳಗಳಲ್ಲಿನ ಬಾರ್‌ಗಳಿಗೆ /ವೈನ್ ಶಾಪ್‌ಗಳಿಗೆ ಮರುಪರವಾನಿಗೆ ನೀಡಿರುವುದರಿಂದ ಸಾರ್ವಜನಿಕರು ತಮ್ಮ ವಿರೋಧವನ್ನು ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?